**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸಿ.ಎನ್ ಮಂಜೇಗೌಡ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರ.**

**ವಿಷಯ:-**

ಬಡವರು, ಕಾರ್ಮಿಕರು, ವಿದ್ಯಾರ್ಥಿಗಳ ಪಾಲಿಗೆ ಆಸರೆಯಾಗಿದ್ದ ಚಾಮರಾಜನಗರದ ಗುಂಡ್ಲುಪೇಟೆ ಪಟ್ಟಣದ ಇಂದಿರಾ ಕ್ಯಾಂಟೀನ್ ದಿಢೀರ್ ಮುಚ್ಚಿರುವ ಕುರಿತು ಇಂದಿನ ಕನ್ನಡಪ್ರಭ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

2013ರಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಆರಂಭಗೊಂಡ ಇಂದಿರಾ ಕ್ಯಾಂಟೀನ್‌ನ ಟೆಂಡರ್ ಬದಲು ಹಾಗೂ ಅನುದಾನವಿಲ್ಲ ಎಂಬ ಕಾರಣದ ಹಿನ್ನೆಲೆಯಲ್ಲಿ ಕಳೆದ ಮೂರು ದಿನಗಳಿಂದ ಮುಚ್ಚಿರುವ ಸಂಗತಿ ತಿಳಿದುಬಂದಿರುತ್ತದೆ. ಪರಿಣಾಮ ಬಡವರು, ಕಾರ್ಮಿಕರು ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದ್ದು, ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕಳೆದ 6 ತಿಂಗಳಿನಿಂದ ವೇತನ ನೀಡದಿರುವುದು, ರೇಷನ್ ಹಾಗೂ ಗ್ಯಾಸ್ ಸಲುವಾಗಿ ಅನುದಾನ ಒದಗಿಸದಿರುವುದು ದುರ್ದೈವದ ಸಂಗತಿಯಾಗಿರುತ್ತದೆ. ಇದರಿಂದಾಗಿ ಇಂದಿರಾ ಕ್ಯಾಂಟೀನ್‌ಗೆ ಬೀಗ ಜಡಿಯಲಾಗಿದೆ. ಟೆಂಡರ್ ಅವಧಿ ಪೂರ್ಣಗೊಳ್ಳುವ ಮೊದಲೇ ಹೊಸ ಟೆಂಡರ್ ನೀಡಲು ಕ್ರಮ ಕೈಗೊಳ್ಳದಿರುವುದು ಸರ್ಕಾರದ ಲೋಪವಾಗಿರುತ್ತದೆ.

ಸರ್ಕಾರ ತಕ್ಷಣವೇ ಬಡವರು, ಕಾರ್ಮಿಕರು ಮತ್ತು ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗುಂಡ್ಲುಪೇಟೆಯ ಇಂದಿರಾ ಕ್ಯಾಂಟೀನ್‌ಗೆ ಮರು ಚಾಲನೆ ನೀಡಿ ಆಹಾರ ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕು ಹಾಗೂ ಅಗತ್ಯವಿರುವ ಅನುದಾನವನ್ನು ಸಹ ಕೂಡಲೇ ಬಿಡುಗಡೆ ಮಾಡಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

*****

**ಉತ್ತರ:-**

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಇಂದಿರಾ ಕ್ಯಾಂಟಿನ್ ದಿನಾಂಕ:07.12.2018 ರಂದು ಉದ್ಘಾಟನೆಗೊಂಡು ಈವರೆವಿಗೂ ಕಾರ್ಯ ನಿರ್ವಹಿಸುತ್ತಿದ್ದು, ಗುತ್ತಿಗೆದಾರರಾದ ಮೆ|| ಚೆಪ್‌ಟಾಕ್ ಫುಡ್ ಅಂಡ್ ಹಾಸ್ಪೆಟಾಲಿಟಿ ಸರ್ವಿಸಸ್ ಪ್ರೈ.ಲಿ., ಬೆಂಗಳೂರು ರವರ ಅವಧಿಯು ಮುಕ್ತಾಯವಾದ ಹಿನ್ನೆಲೆಯಲ್ಲಿ ದಿನಾಂಕ:16.12.2022 ರಂದು ಹೊಸದಾಗಿ ಟೆಂಡರ್ ಪ್ರಕಟಿಸಲಾಗಿ, ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಘನ ಉಚ್ಛ ನ್ಯಾಯಾಲಯದಲ್ಲಿ W.P No.5428/2023 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಘನ ಉಚ್ಛ ನ್ಯಾಯಾಲಯವು Status quo to be Maintained by the parties as on today ಎಂದು ಪ್ರಕರಣವನ್ನು ದಿನಾಂಕ:06.11.2024 ರಂದು ಮುಕ್ತಾಯಗೊಳಿಸಿ ಆದೇಶಿಸಿರುವಂತೆ ಪೌರಾಡಳಿತ ನಿರ್ದೇಶನಾಲಯದ ಆದೇಶ ಸಂಖ್ಯೆ DMA/UPA/INC/11/2023 ದಿನಾಂಕ:30.08.2023 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊಸ ಮೆನುವಿನೊಂದಿಗೆ ದರ ಪರಿಷ್ಕರಿಸಿರುವಂತೆ ದಿನಾಂಕ:13.11.2024 ರಂದು ನೂತನ ಟೆಂಡರ್ ಆಹ್ವಾನಿಸಿ ಹೊಸ ಏಜೆನ್ಸಿದಾರರಾದ ಶ್ರೀ ಗುತ್ತಿ ಬಸವೇಶ್ವರ ಮ್ಯಾನ್ ಪವರ್ ಏಜೆನ್ಸಿ, ತಾಳಿಕೋಟೆ, ವಿಜಯಪುರ ಜಿಲ್ಲೆ ರವರಿಗೆ ದಿ:10.03.2025 ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನ ಇಂದಿರಾ ಕ್ಯಾಂಟಿನ್‌ನ ಹಿಂದಿನ ಏಜೆನ್ಸಿದಾರರಾದ ಮೆ|| ಚೆಫ್‌ಟಾಕ್ ಫುಡ್ ಅಂಡ್ ಹಾಸ್ಪೆಟಾಲಿಟಿ ಸರ್ವಿಸಸ್ ಪ್ರೈ.ಲಿ., ಬೆಂಗಳೂರು ರವರಿಗೆ ದಿನಾಂಕ:28.11.2024 ರಂದು ರೂ.29,78,060/-ಗಳ ಬಿಲ್ ಪಾವತಿಸಲಾಗಿದ್ದು ಸದರಿಯವರಿಂದ ನೂತನ ಏಜೆನ್ಸಿದಾರರಿಗೆ ಕ್ಯಾಂಟೀನ್ ಹಾಗೂ ಸಾಮಾಗ್ರಿಗಳ ಹಸ್ತಾಂತರ ಪ್ರಕ್ರಿಯೆಲ್ಲಿರುತ್ತದೆ. ಈ ಹಿಂದಿನ ಏಜೆನ್ಸಿದಾರರಾದ ಮೆ||ಚೆಫ್‌ಟಾಕ್ ಫುಡ್ ಅಂಡ್ ಹಾಸ್ಪೆಟಾಲಿಟಿ ಸರ್ವಿಸಸ್ ಪ್ರೈ.ಲಿ ಬೆಂಗಳೂರು ರವರು ಆಹಾರ

ಸರಬರಾಜು ಸೇವೆಯನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸದರಿ ಸಂಸ್ಥೆಯ ವಿರುದ್ಧ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಕಾನೂನು ರೀತ್ಯಾ ಕ್ರಮವಹಿಸಲಾಗುತ್ತಿದೆ ಹಾಗೂ ಪ್ರಸ್ತುತ ಇಂದಿರಾ ಕ್ಯಾಂಟೀನ್‌ನ ಆಹಾರ ಸರಬರಾಜು ಸೇವೆ ಒದಗಿಸಲು ಅನುದಾನದ ಕೊರತೆ ಇರುವುದಿಲ್ಲ. ಇಂದಿರಾ ಕ್ಯಾಂಟೀನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ವೇತನ ಪಾವತಿಸುವುದು ಗುತ್ತಿಗೆದಾರರಾದ **ಮೆ|| ಚೆಫ್‌ಟಾಕ್ ಫುಡ್ ಅಂಡ್ ಹಾಸ್ಪೆಟಾಲಿಟಿ ಸರ್ವೀಸಸ್ ಪ್ರೈ.ಲಿ.**, ಬೆಂಗಳೂರು ರವರ ಜವಾಬ್ದಾರಿಯಾಗಿರುತ್ತದೆ.

ಸಂಖ್ಯೆ:ನಅಇ 80 ಎಸ್‌ಎಫ್‌ಸಿ 2025

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು